ಈಜು ಕೊಳ ನಿರ್ಮಾಣ

2079 (2537); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಂತಾಮಣಿ ತಾಲ್ಲೂಕಿನ ಕಸಬಾ ಹೋಬಳಿ, ಕಟಮಾಚನಹಳ್ಳಿಯ ಸರ್ವೆ ನಂ. 18ರ ಸರ್ಕಾರಿ ಖರಾಬು ಜಮೀನಿನಲ್ಲಿ ಈಜುಕೋಳ ನಿರ್ಮಾಣ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು;

ಇ) ಯಾವ ಕಾಲಮಿತಿಯೊಳಗೆ ಈಜುಕೊಳ ನಿರ್ಮಾಣ ಮಾಡಲಾಗುವುದು (ವಿವರ ನೀಡುವುದು)

ಈ) ಚಿಂತಾಮಣಿ ನಗರದ ಝಾನ್ಸಿರಾಣಿ ಕ್ರೀಡಾಂಗಣದ ಅಭಿವೃದ್ಧಿ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಿಂದ ಮಂಜೂರು ಮಾಡಿದ ಮೊತ್ತವೆಷ್ಟು (ವಿವರ ನೀಡುವುದು);

ಉ) ಕ್ರೀಡಾಂಗಣದ ಅಭಿವೃದ್ಧಿಗೆ ಮಂಜೂರು ಮಾಡಿದ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ (ಖರ್ಚು ಮಾಡಿದ ಅನುದಾನ ಮತ್ತು ಉಳಿಕೆಯಾಗಿರುವ ಅನುದಾನದ ವಿವರ ನೀಡುವುದು);

ಊ) ಕ್ರೀಡಾಂಗಣದ ಉತ್ತರ ಮತ್ತು ಪೂರ್ವದ ಕಡೆ ನಿರ್ಮಾಣ ಮಾಡಿರುವ ಅಂಗಡಿ ಮಳಿಗೆಗಳ ಕಾಮಗಾರಿಗಳು ಪೂರ್ಣಗೊಳ್ಳದೇ ಸ್ಥಗಿತಗೊಂಡಿದ್ದು, ಅವುಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು (ವಿವರ ನೀಡುವುದು)?

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈಜುಕೊಳ ನಿರ್ಮಿಸಲು ಗುರುತಿಸಿರುವ ನಿವೇಶನವು ಸರ್ಕಾರದ ಖರಾಬು ಜಮೀನಾಗಿದ್ದು, ಈ ನಿವೇಶನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸುವಂತೆ ಕಂದಾಯ ಇಲಾಖೆಯನ್ನು ಕೋರಲಾಗಿದೆ.

ಇ) ನಿವೇಶನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಿದ ನಂತರ ಮತ್ತು ಅನುದಾನ ಲಭ್ಯತೆಯ ಆಧಾರದ ಮೇಲೆ ಈಜುಕೋಳ ನಿರ್ಮಾಣ ಮಾಡಲಾಗುವುದು.

ಈ) ಕಳೆದ ಮೂರು ವರ್ಷಗಳಿಂದ ₹ 166.85 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

ಉ) ಚಿಂತಾಮಣಿ ತಾಲ್ಲೂಕು ಕ್ರೀಡಾಂಗಣದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ಹಾಲಿ ಇರುವ ಪೆವಿಲಿಯನ್ ಗ್ಯಾಲರಿಯ ಛಾವಣಿ ನಿರ್ಮಾಣ
2. ಕ್ರೀಡಾಂಗಣದ ಸುತ್ತಲೂ ಗ್ಯಾಲರಿ ನಿರ್ಮಿಸುವುದು
3. ಸ್ಕೇಟಿಂಗ್ ರಿಂಗ್ ನಿರ್ಮಿಸುವುದು
4. ಶೌಚಾಲಯ ನಿರ್ಮಾಣ

₹ 245.00 ಲಕ್ಷಗಳ ಅನುದಾನಕ್ಕೆ ಅನುಮೋದನೆ ದೊರೆತಿದ್ದು, ಇಲ್ಲಿಯವರೆಗೆ 166.85 ಲಕ್ಷಗಳ ಮಾತ್ರ ಬಿಡುಗಡೆಯಾಗಿರುತ್ತದೆ. ಉಳಿಕೆ ₹ 78.15 ಲಕ್ಷಗಳ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಯಾವುದೇ ಅನುದಾನ ಉಳಿತಾಯವಾಗಿರುವುದಿಲ್ಲ.

ಊ) ಕ್ರೀಡಾಂಗಣದ ಉತ್ತರ ಮತ್ತು ಪೂರ್ವದ ಕಡೆ ಗ್ಯಾಲರಿ ನಿರ್ಮಿಸಿದ್ದು, ಈ ಗ್ಯಾಲರಿಯ ತಳಭಾಗದಲ್ಲಿ ಅಂಗಡಿ ಮಳಿಗೆಗಳನ್ನು ನಿರ್ಮಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.